ಅಧ್ಯಕ್ಷರು.—ಸೂಚನೆಯ ಪ್ರಕಾರ ನಿಯಮಾವಳಿ ೩೩ಳ ರಂತೆ ಉತ್ತರ ಕೊಟ್ಟಿದ್ದಾರೆ ಇದರ ಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕು ಎಂದರೆ ಬೇರೆ ನಿಯಮಗಳ ಪ್ರಕಾರ ಕಳುಹಿಸಿಕೊಡಿ.

ಶ್ರೀ ಜೆ. ಡಿ, ಸೋಮಪ್ಪ.—ಕ್ಲಾರಿಫಿಕೇಷನ್ ಕೇಳಿ ಇದಕ್ಕೆ ಉತ್ತರ ಹೇಳಬೇಡವೇ ?

ಅಧ್ಯಕ್ಷರು.—೩೩ಳಿರಲ್ಲಿ ಯಾರು ಕಳುಹಿಸಿದ್ದಾರೆ ಅಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಶ್ರೀ ಕೆ. ಶಿವಮೂರ್ತಿ.—ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟರೆ ಇದನ್ನು ಆಸ್ಪತ್ರೆಗೆ ಕಳುಹಿಸಿ ಕೊಡಬೇಕೆಂದು ಹೇಳುತ್ತಾರೆ.

ಅಧ್ಯಕ್ಷರು.—ನಿಯಮ ೩೩ಳಿರಲ್ಲಿ ಉತ್ತರ ತರಿಸಿಕೊಟ್ಟ ಮೇಲೆ ಚರ್ಚೆಯಾಗಬೇಕು ಎಂದು ಬೇರೆ ನೋಟೀಸ್ ಕಳುಹಿಸಿ.

ಶ್ರೀ ಕೆ. ಶಿವಮೂರ್ತಿ.—ಅವರಿಗೆ ಬೇಕಾದ ಹಾಗೆ ಉತ್ತರ ಕೊಟ್ಟರೆ ನಾವು ಕೇಳುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು.—ಬೇರೆ ನೋಟೀಸ್ ಕೊಡಿ, ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ix) ಕ್ಯಾನ್ಸರ್ ರೋಗ ನಿವಾರಣೆಯ ಬಗ್ಗೆ ವ್ಯಾಕ್ಸೀನ್ ತಯಾರಿಸುವುದು

ಶ್ರೀ ವಸಂತ ಬಂಗೇರಾ.—ಮಾನ್ಯ ಅಧ್ಯಕ್ಷರೇ. ನಮ್ಮ ರಾಜ್ಯದಲ್ಲಿ ಮಂಗಳೂರಿನಲ್ಲಿ ೧೯೫೨ನೇ ಇಸವಿಯಲ್ಲಿ ಸೊರಬ ಗ್ರಾಮದಲ್ಲಿ ಪ್ರಾರಂಭವಾಯಿತು. ೧೯೭೧ರಲ್ಲಿ ರಾಷ್ಟ್ರೀಯ ಸಿಸ್ತರಣಾ ವಿಜ್ಞಾನ ಸಂಸ್ಥೆಯು ಲಸಿಕೆ ತಯಾರು ಮಾಡಿದ್ದಾರೆ. ಆಗಿನ ಸರ್ಕಾರ ಲಸಿಕೆ ತಯಾರಿಕೆಯಲ್ಲಿ ಆಷ್ಟು ಆಸಕ್ತಿ ಯನ್ನು ತೋರಿಸಲಿಲ್ಲ ಈಗ ಈ ಸರ್ಕಾರ ಬಂದು ಒಂದು ವರ್ಷ ಒಂದು ತಿಂಗಳು ೧೮ ದಿನಗಳು ಕಳೆದು ಮಾನ್ಯ ಮುಖ್ಯ ಮಂತ್ರಿಗಳು ಲಸಿಕೆ ತಯಾರಿಕೆಗಾಗಿ ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳು, ಸೌತ್ ಕೆನರಾ ಡಿ.ಸಿ.ಯವರು ಮತ್ತು ಶಾಸಕರ ಮೀಟಿಂಗ್ ನಡೆಯಿತು.? ಮಾನ್ಯ ಸಚಿವರು ಹತ್ತೊಂಭತ್ತುವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ತಿಳಿಸಿದರು. ಮೊನ್ನೆ ಕೆಲವು ಪತ್ರಿಕೆಯಲ್ಲಿ ೧೮ ಲಕ್ಷ, ೧೫ ಲಕ್ಷ ಈ ರೀತಿಯಾಗಿ ಬೇರೆ ಬೇರೆ ಫಿಗರ್ಸ್‌ಗಳನ್ನು ಕೊಟ್ಟರು. ಈ ರೀತಿಯಾದ ವ್ಯತ್ಯಾಸವು ಬರುವುದಕ್ಕೆ ಕಾರಣವೇನು? ಕಳೆದವಾರ ಬೆಳ್ತಂಗಡಿಯಲ್ಲಿ ಸಾರ್ವಜನಿಕ ಸಭೆ ನಡೆಯಿತು, ಆ ಸಭೆಯಲ್ಲಿ ಪೂನಾ ವಿಜ್ಞಾನ ಸಂಸ್ಥೆಯ ಡಾ. ಪಾವಟೆ ಮತ್ತು ಡಾ. ಹೆಚ್. ಆರ್. ಭಟ್ ಅವರನ್ನು ಕೇಂದ್ರ ಸರ್ಕಾರದಿಂದ ಲಸಿಕೆ ತಯಾರಿಕೆಗಾಗಿ ಟ್ರೈನಿಂಗ್‌ಗೆ ಕಳುಹಿಸಿ ಕೊಟ್ಟಿದ್ದೀರಿ. ಇವರು ಕಳುಹಿಸಿಕೊಟ್ಟಂಥವರು ಯಾರು ಎಂದರೆ ಅವರು ನೇರವಾದ ವಿಜ್ಞಾನಿಗಳಲ್ಲ. ಕೇವಲ ಟೆಕ್ನೀಷಿಯನ್‌ಗಳನ್ನು ಕಳುಹಿಸಿದ್ದಾರೆ ಇವರು ಟ್ರೈನಿಂಗ್ ಮುಗಿಸಿಕೊಂಡು ಬಂದ ೨ ವರ್ಷದಲ್ಲೇ ತಮ್ಮ ಕೆಲಸದಿಂದ ರಿಟೈರ್ ಆಗುತ್ತಾರೆ. ಟ್ರೈನಿಂಗ್ ಆದ ಎರಡು ತಿಂಗಳ ಲ್ಲಿಯೇ ನಿವೃತ್ತರಾಗುತ್ತಿದ್ದಾರೆ. ಆದರೂ ಸಹ ಇಂತಹವರನ್ನು ಟ್ರೈನಿಂಗಿಗೆ ಕಳುಹಿಸಿದ್ದಾರೆ. ಈ ರೋಗ ವಾಸಿ ಮಾಡಲು ಬೇಕಾದ ಲಸಿಕೆಯನ್ನು ತಯಾರಿಸುವಂತಹ ವ್ಯವಸ್ಥೆ ನಡೆಯುತ್ತಿದೆ. ಆದರೆ ಈ ಗಂಭೀರವಾದಂಥ ಕಾಯಿಲೆಯಿಂದ ಈಗಾಗಲೇ ೩೦೦ ಮಂದಿ ಕೀರಿಹೋಗಿದ್ದಾರೆ ಮತ್ತು ೧೫೦೦ ಜನರಿಗೆ ಈ ರೋಗ ತಗುಲಿದೆ. ಆದರೂ ಇದರ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯಕ್ಕೆ ಮಾನ್ಯ ಸಚಿವರು ಕಾರಣರೇ ಅಥವಾ ಅಧಿಕಾರ ವರ್ಗದವರು ಕಾರಣರೇ? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡ ಬೇಕು. ಈ ರೋಗದ ಗಂಭೀರತೆಯನ್ನು ಗಮನಿಸಿ ಒಳ್ಳೆಯ ನುರಿತವರನ್ನೇ ಟ್ರೈನಿಂಗಿಗೆ ಕಳುಹಿಸಿ ಕೊಡಬೇಕು. ಈ ಬರುವ ನವೆಂಬರ್ ತಿಂಗಳೊಳಗಾಗಿ ಇದಕ್ಕೆ ಬೇಕಾದ ಲಸಿಕೆಯನ್ನು ತಯಾರಿಸ ಬೇಕೇ ಹೊರತು ಮತ್ತೆ ಇದನ್ನು ೮೫ ಡಿಸೆಂಬರ್ ಅಥವಾ ೮೬ನೇ ಡಿಸೆಂಬರ್‌ವರೆಗೆ ಮುಂದಕ್ಕೆ ಹಾಕ ಬಾರದು. ಈ ರೋಗ ಅನೇಕ ಬಡ ಜನರ ಪ್ರಾಣವನ್ನು ಬಲಿ ತೆಗೆದುಕೊಂಡಿದೆ. ಈ ರೋಗದಿಂದ ಯಾರು ಸತ್ತಿದ್ದಾರೆ ಅಂತಹವರ ಕುಟುಂಬದವರಿಗೆ ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡಿ ದ್ದಾರೆ. ಎಷ್ಟು ಪರಿಹಾರ ಕೊಡುತ್ತಾರೆಂಬುದನ್ನು ಈಗಲೇ ಸ್ಪಷ್ಟವಾಗಿ ಹೇಳಬೇಕು. ಎಷ್ಟು ಸಮಯದಲ್ಲಿ ಈ ಲಸಿಕೆ ತಯಾರಾಗುತ್ತದೆಂಬುದನ್ನು ಸಹ ಮಾನ್ಯ ಮಂತ್ರಿಗಳು ಹೇಳಬೇಕು ಮತ್ತು ಎಲ್ಲೆಲ್ಲಿ ಈ ರೋಗ ಹರಡಿದೆ, ಆಲ್ಲೆಲ್ಲಾ ಕೃತಕ ಮಳೆ ಬರಿಸುವಂತಹ ಒಂದು ವ್ಯವಸ್ಥೆಯಾಗಬೇಕು ಹಾಗೂ ಅಂತಹ ಕಡೆಗಳಲ್ಲಿ ಔಷಧ (ಮದ್ದು) ವನ್ನು ಸಿಂಪಡಿಸುವಂತಹ ಒಂದು ವ್ಯವಸ್ಥೆ ಮಾಡಬೇ ಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀ ವಸಂತಬಂಗೇರ ಅವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆದರಲ್ಲಿಯೂ ವಿಶೇಷವಾಗಿ ಬೆಳ್ತಂಗಡಿ ತಾಲ್ಲೂಕ್‌ನಲ್ಲಿ ಹಬ್ಬುತ್ತಿರುವ ಈ ಮಂಗನಕಾಯಿಲೆ ಬಗ್ಗೆ ಹೇಳಿದ್ದಾರೆ. ಅವರು ಹೇಳಿದ್ದರಲ್ಲಿ ಒಂದೆರಡು ವಿಷಯಗಳು ಸರಿಯಾಗಿದೆ. ಮೊದಲನೆಯದಾಗಿ ಈ ರೋಗ ಒಂದು ಸಾವಿರ ಜನರಿಗೆ ಹಬ್ಬಿರುವುದು ನಿಜ. ಇದರಲ್ಲಿ ೮೨ ಜನರು ಈಗಾಗಲೇ ಸತ್ತಿರುವುದೂ ಸಹ ನಿಜ. ಈ ವಿಚಾರದಲ್ಲಿ ಮಂತ್ರಿಗಳು ಮತ್ತು ಅಧಿಕಾರಿಗಳು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಿಲ್ಲ ಮತ್ತು ಇದಕ್ಕೆ ಬೇಕಾದ ಲಸಿಕೆಯನ್ನು ಇನ್ನೂ ತಯಾರು ಮಾಡಿಲ್ಲವೆಂದು ಏನು ಹೇಳಿದ್ದಾರೆ, ಇದು ಮಾತ್ರ ಸತ್ಯಕ್ಕೆ ದೂರ ವಾದುದು. ಏಕೆಂದರೆ ೧೯೮೪ನೇ ಇಸವಿ ನವೆಂಬರ್ ತಿಂಗಳಲ್ಲಿ ಇದಕ್ಕೆ ಬೇಕಾದ ಲಸಿಕೆಯನ್ನು ಶಿವಮೊಗ್ಗ ದಲ್ಲಿ ತಯಾರು ಮಾಡಿ ಆಗತ್ಯವಿರುವವರಿಗೆಲ್ಲಾ ಕೊಡುವಂತಹ ಒಂದು ಪರಿಸ್ಥಿತಿಯಲ್ಲಿರುತ್ತೇವೆಂದು ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ದಕ್ಷಿಣಕನ್ನಡ ಜಿಲ್ಲೆಯ ಜಿಲ್ಲಾಧಿ ಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ದಕ್ಷಿಣಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಸುತ್ತಾಡಿ ಎಲ್ಲೆಲ್ಲಿ ಈ ರೋಗ ಹರಡಿದೆ ಎಂಬುದನ್ನು ನೋಡಿ ಬಂದಿದ್ದಾರೆ. ಇದರ ನಂತರ ನಾನು ೧೫ ದಿವಸಗಳ ಹಿಂದೆ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಸಂಬಂಧಪಟ್ಟ ಶಾಸಕರ ಒಂದು ಸಭೆಯನ್ನು ಮಾಡಿದೆ. ಆ ಸಭೆಗೆ ಮಾನ್ಯ ವಸಂತಬಂಗೇರ ಅವರೂ ಸಹ ಬಂದಿದ್ದರು. ಆಗ ಅವರ ಸಲಹೆಗಳನ್ನು ಸಹ ನಾನು ತೆಗೆದುಕೊಂಡಿದ್ದೇನೆ. ಈ ಲಸಿಕೆಯನ್ನು ತಯಾರು ಮಾಡಬೇಕಾದರೆ ವಿದೇಶದಿಂದ ಉಪಕರಣಗಳನ್ನು ತರಿಸಬೇಕಾಗುತ್ತದೆ. ವಿದೇಶದಿಂದ ತರಿಸಬೇಕಾದರೆ ೮ ತಿಂಗಳಾದರೂ ಬೇಕಾಗುತ್ತದೆ. ಆದಕ್ಕೋಸ್ಕರ ನಾನು ಒಬ್ಬರು ಅಧಿಕಾರಿಯನ್ನು ಈ ಕೆಲಸಕ್ಕಾಗಿಯೇ ದೆಹಲಿಗೆ ಕಳುಹಿಸಿದ್ದೇನೆ. ಅವರು ಅಲ್ಲಿಯೇ ಇದ್ದು ಆದಷ್ಟೂ ಬೇಗ ಅಲ್ಲಿನ ಸಂಬಂಧಪಟ್ಟ ಕೇಂದ್ರ ಸರ್ಕಾರದ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಉಪಕರಣ ಗಳು ಆದಷ್ಟೂ ಬೇಗ ನಮ್ಮ ರಾಜ್ಯಕ್ಕೆ ಬರುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಆಜ್ಞೆ ಮಾಡಿದ್ದೇನೆ ಈಗ ಶಿವಮೊಗ್ಗದಲ್ಲಿ ಇದಕ್ಕೆ ಸಂಬಂಧಪಟ್ಟ ಲಸಿಕೆ ತಯಾರು ಮಾಡುವಂತಹ ಲ್ಯಾಬೊರೇಟರಿ ಕಟ್ಟಡ ಏನಿದೆ, ಅದನ್ನು ಸ್ವಲ್ಪ ರಿನೋವೇಷನ್ ಮಾಡಬೇಕಾಗಿದೆ. ಈ ಕೆಲಸವನ್ನು ಲೋಕೋಪಯೋಗಿ ಇಲಾಖೆಯವರು ಜೂನ್ ತಿಂಗಳ ಹೊತ್ತಿಗೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧ ಪಟ್ಟಂತೆ ೧೯೮೫-೮೬ರ ಬಡ್ಜೆಟ್‌ನಲ್ಲಿ ೧೯ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನೂ ಹೆಚ್ಚು ಹಣ ಬೇಕಾದರೂ ಕೂಡ ನಾವು ವಿಚ್ರ್ ಮಾಡುವುದಕ್ಕೆ ತಯಾರಿದ್ದೇವೆ. ಇದರ ಒಂದು technical know-how ಬಗ್ಗೆ ಐ.ಸಿ.ಎಂ.ಆರ್. ನವರು ಮಾರ್ಗದರ್ಶನ ನೀಡಲು ಒಪ್ಪಿದ್ದಾರೆ. ಇದರ ಜೊತೆಗೆ Poona Institute of Virology ಅವರು ಟ್ರೈನಿಂಗ್‌ನ್ನು ಕೊಡಲು ಒಪ್ಪಿದ್ದಾರೆ. ಆದಕ್ಕಾಗಿ ನಾವು ಈಗಾಗಲೇ ಇಬ್ಬರು ಟಿಕ್ನೀಷಿಯನ್‌ಗಳನ್ನು ಆಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ವೈದ್ಯರು ಗಳ ಜೊತೆಗೆ ನರ್ಸಿಂಗ್ ಸ್ಟಾಫ್‌ನ್ನು ಸಹ ಟ್ರೈನಿಂಗ್ ಪಡೆಯಲು ಕಳುಹಿಸುತ್ತಿದ್ದೇವೆ. ಇದರಲ್ಲಿ ಒಬ್ಬರು ಇನ್ನು ೨ ತಿಂಗಳಲ್ಲಿ ನಿವೃತ್ತಿಯಾಗುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ನನಗೆ ಗೊತ್ತಿಲ್ಲ. ಆ ರೀತಿ ಏನಾದರೂ ಇದ್ದರೆ ನಾನು ಬೇರೆಯವರನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈ ಮಂಗನಕಾಯಿಲೆಯಿಂದ ಸತ್ತಂತಹ ಬಡ ಕುಟುಂಬದವರಿಗೆ ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಹಣ ಕೊಡಬೇಕೆಂದು ಈಗಾಗಲೇ ನಿರ್ಧಾರ ಮಾಡಲಾಗಿದೆ. ಇದೇ ವಿಚಾರವನ್ನು ಮಾನ್ಯ ಬಂಗೇರಾ ಅವರಿಗೂ ಮತ್ತು ಇತರೇ ಎಲ್ಲಾ ಶಾಸಕರಿಗೆ ಆ ದಿನ ನಡೆದ ಸಭೆಯಲ್ಲಿ ತಿಳಿಸಿದ್ದೇನೆ. ಈ ವಿಚಾರದಲ್ಲಿ ನಮ್ಮ ಸರ್ಕಾರ ಯಾವುದೇ ರೀತಿಯಿಂದ ನಿರ್ಲಕ್ಷ್ಯ ಮಾಡಿಲ್ಲ. ಇದೊಂದು ದುಃಖಕರ ವಾದಂಥ ಸಂಗತಿ. ಈ ಮಂಗನಕಾಯಿಲೆ ಹರಡುವುದನ್ನು ತಪ್ಪಿಸಲು ಬೇಕಾದ ಲಸಿಕೆ ಇಲ್ಲಿಯವರೆಗೆ ತಯಾರಾಗಿಲ್ಲ. ಇದನ್ನು ತಯಾರಿಸಿದ ಮೇಲೂ ಸಹ ಶೇಕಡಾ ನೂರರಷ್ಟು ಪರಿಹಾರ ಕೊಡುವುದಿಲ್ಲ ವೆಂಬುದು ಎಲ್ಲರಿಗೂ ಗೊತ್ತಿದೆ. ಶೇಕಡಾ ೬೦ರಿಂದ ಶೇಕಡಾ ೭೦ರವರೆಗೆ ಪರಿಹಾರ ಸಿಗಬಹುದು. ಲಸಿಕೆ ತಯಾರಿಕೆಯಲ್ಲಿ ಯಾವುದೇ ರೀತಿಯಿಂದ ತಪ್ಪಾಗದಂತೆ ನಾವು ನೋಡಿ ಕೊಳ್ಳುತ್ತೇವೆ ನವೆಂಬರ್ ತಿಂಗಳಲ್ಲಿ ಇದು ತಯಾರಾದ ಕೂಡಲೇ ದಕ್ಷಿಣಕನ್ನಡ ಜಿಲ್ಲೆಗೆ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಈ ಕಾಯಿಲೆ ಎಲ್ಲೆಲ್ಲಿ ಇದೆ ಎಂಬ ಚಿಪ್ಪೆ ಕಂಡುಬರುತ್ತದೋ ಅಂತಹ ಕಡೆಗಳಿಗೆಲ್ಲಾ ಅದರಲ್ಲಿಯೂ ಮುಖ್ಯ ವಾಗಿ ಪುಲೆನಾಡು ಹಾಗೂ ಕಾಡು ಪ್ರದೇಶಗಳಲ್ಲಿ ಇದನ್ನು ಹಂಚುವಂತಹ ಒಂದು ವ್ಯವಸ್ಥೆ ಮಾಡು ತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರು.—ವಾಣ್ಯ ಮಲ್ಲಿಕಾರ್ಜುನ ಖಾರ್ಗೆಯವರು ಕಳುಹಿಸಿರುವಂತಹ ಈ ನೋಟೀಸ್ ಲೋಕೋಪಯೋಗಿ ಇಲಾಖೆಯಲ್ಲಿ ಬರುವುದಿಲ್ಲ. ಆರ್.ಡಿ.ಪಿ. ಯಲ್ಲಿ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಲೋಕೋಪಯೋಗಿ ಇಲಾಖೆಯಲ್ಲಿ ಬರುವುದಿಲ್ಲ ಎಂಬುದು ನನಗೂ ಸಹ ಗೊತ್ತಿದೆ. ಆದರೆ ಈ ರಸ್ತೆ ಕೆಲಸಗಳನ್ನು ಹಾಗೂ ಟ್ಯಾಂಕ್ ಕೆಲಸಗಳನ್ನು ಆರ್.ಡಿ.ಪಿ.ನವರೂ ಸಹ ಮಾಡುತ್ತಿಲ್ಲ. ನಮ್ಮ ಬೀದರ್ ಜಿಲ್ಲೆಯಲ್ಲಿ ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ ಈ ಕೆಲಸಗಳನ್ನು ಲ್ಯಾಂಡ್-ಆರ್ಮಿ ಕಾರ್ಪೊರೇಷನ್ ಅವರು ಮಾಡುತ್ತಿದ್ದಾರೆ. ಆದರೆ ಇವರು ಈ ಕೆಲಸಗಳನ್ನು ಮಾಡುವಾಗ ಸರಿಯಾಗಿ ಸರ್ವೆ ಮಾಡುವುದಿಲ್ಲ ಫ್ಲಂಡ್ ಬಂದಂಥ ಸಮಯದಲ್ಲಿ ಬ್ರೀಚ್ ಆಗಿರುವಂತಹ ಟ್ಯಾಂಕ್‌ಗಳನ್ನು ಸರಿಯಾಗಿ ರಿಪೇರಿ ಮಾಡಲು ಇವರಿಗೆ ಬರುವುದಿಲ್ಲ. ಆದ್ದರಿಂದ

ಅಧ್ಯಕ್ಷರು.—ಆರ್.ಡಿ.ಪಿ. ಡಿಮ್ಯಾಂಡ್ ಬಂದಾಗ ಇದನ್ನೆಲ್ಲಾ ತಾವು ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಂತಹ ಕೆಲಸಗಳನ್ನು ಲ್ಯಾಂಡ್-ಆರ್ಮಿ ಕಾರ್ಪೊರೇಷನ್ ಅವರ ಮೂಲಕ ಮಾಡಿಸುವುದಕ್ಕೆ ಬದಲು ಈ ಮೊದಲಿನಂತೆಯೇ ಲೋಕೋಪಯೋಗಿ ಇಲಾಖೆಯ ವತಿಯಿಂದಲೇ ಮಾಡಬಾರದೆಂದು ನಾನು ಕೇಳುತ್ತಿದ್ದೇನೆ. ನೆನ್ನೆ ದಿವಸವೇ ನಾನು ಈ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆದಾಗ ಅವರು ಇವೊತ್ತು ಉತ್ತರ ಕೊಡುವುದಾಗಿ ಹೇಳಿದರು. ಆದ್ದರಿಂದ ಇವೊತ್ತು ತಮ್ಮ ಮೂಲಕ ಅವರ ಗಮನ ಸೆಳೆಯುತ್ತಿದ್ದೇನೆ ನಮ್ಮ ಭಾಗದಲ್ಲಿ ರಸ್ತೆ ಕೆಲಸ ಹಾಗೂ ಟ್ಯಾಂಕ್‌ಗಳ ರಿಪೇರಿಗೆಂದು ಬಡ್ಜೆಟ್ಟಿನಲ್ಲಿ ೩೦-೪೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೂ ಸಹ ಇಲ್ಲಿಯವರೆಗೆ ಒಂದೂ ಸಹ ಕೆಲಸ ಪ್ರಾರಂಭವಾಗಿಲ್ಲ. ಈ ಕೆಲಸಗಳನ್ನು ಲೋಕೋಪಯೋಗಿ ಇಲಾಖೆ ಮೂಲಕ ಕೂಡಲೇ ಮಾಡಿಸದಿದ್ದರೆ ಅನೇಕ ಜನರಿಗೆ ತೊಂದರೆಯಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಗಮನ ಸೆಳೆಯುವ ಸೂಚನೆ

ಕೊಪ್ಪ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರು ಸಂಬಳವಿಲ್ಲದೆ ತೊಂದರೆಗೊಳಗಾಗಿರುವುದು

ಅಧ್ಯಕ್ಷರು.—ಶ್ರಿ ಎಸ್. ಪುಟ್ಟಸ್ವಾಮಿಯವರು ಸಭೆಯಲ್ಲಿ ಇಲ್ಲದಿರುವ ಕಾರಣ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್, ಜಿ. ಗೋವಿಂದಗೌಡ.—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರು ಸಂಬಳವಿಲ್ಲದೆ ತೊಂದರೆಗೊಳಗಾಗಿರುವ ವಿಚಾರವನ್ನು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ತರುತ್ತೇನೆ.—

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನನ್ನ ಹೇಳಿಕೆ ಈ ಕೆಳಕಂಡಂತೆ ಇದೆ.—

ರಾಜ್ಯದಲ್ಲಿ ಕೆಲವು ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ಪದವೀಧರ ಮುಖ್ಯೋಪಾಧ್ಯಾಯರು (ಮಾದರಿ ಪ್ರಾಥಮಿಕ ಶಾಲೆ) ನಿಯಮ ೩೨ ರನ್ವಯ ಪ್ರಭಾರಿಯಾಗಿ ಸೇವೆ ಸಲ್ಲಿಸುತ್ತಿದ್ದು ಅವರ ಮುಂದುವರಿಕೆಯ ಬಗ್ಗೆ ಪ್ರತಿ ೬ ತಿಂಗಳಿಗೊಮ್ಮೆ ಸರ್ಕಾರ ಆಜ್ಞೆ ಹೊರಡಿಸಿ ಮುಂದುವರೆಸಲಾಗುತ್ತಿತ್ತು. ಇಂತಹ ಪ್ರಕರಣಗಳಲ್ಲಿ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಸಹಾಯಕ ಶಿಕ್ಷಣಾಧಿಕಾರಿಗಳು ಒಬ್ಬರಿರುತ್ತಾರೆ.

ಮೇಲ್ಕಂಡ ೩೨ರ ನಿಯಮದಡಿಯಲ್ಲಿ ಪ್ರಭಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಶಿಕ್ಷಣಾಧಿಕಾರಿಗಳು ಹಾಗೂ ಮುಖ್ಯೋಪಾಧ್ಯಾಯರುಗಳ ಮುಂದುವರಿಕೆಗೆ ಸರ್ಕಾರವಿತ್ತಿದ್ದ ಆದೇಶ ಡಿಸೆಂಬರ್ ೮೩ಕ್ಕೆ ೬ ತಿಂಗಳ ಅವಧಿ ಮುಂಗಿದಿದ್ದು ಇದನ್ನು ಪುನ: ನವೀಕರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು. ಸದರಿ ಪ್ರಸ್ತಾವನೆ ಆಧಾರದ ಮೇಲೆ ಸರ್ಕಾರ ತಮ್ಮ ಆದೇಶ ನಂ. ಇಡಿ ೧೫೫ ಪಿ.ಎಂ.ಎಸ್. ೮೪ ದಿನಾಂಕ ೧೭-೨-೧೯೮೪ರಲ್ಲಿ ನವೀಕರಿಸಿದ ಆದೇಶವನ್ನು ಹೊರಡಿಸಿದೆ. ಸರ್ಕಾರದ ಆದೇಶದಂತೆ ಮಹಾಲೇಖಪಾಲರು ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಖಜಾನೆ ಅಧಿಕಾರಿಗಳಿಗೆ ಆದೇಶ ಕಳುಹಿಸಿ ಮೇಲ್ಕಂಡ ಅಧಿಕಾರಿಗಳಿಂದ ಸಲ್ಲಿಸಲ್ಪಟ್ಟ ಸಂಬಳ ಇತ್ಯಾದಿ ಬಿಲ್‌ಗಳನ್ನು ಅಂಗೀಕರಿಸುವಂತೆ ಸೂಚನೆ ನೀಡಿದೆ.